ಪ್ರಬಂಧ

# ನೆಲ–ಬಾನು ‘ಸಂಬಂಜ’ ಅನ್ನೋದು



**ರಹಮತ್ ತರೀಕೆರೆ**

ಕಲೆ: ಸಂತೋಷ್ ಸಸಿಹಿತ್ಲು

ನಾನು ವಾಹನಗಳಲ್ಲಿ ಪಯಣಿಸುವಾಗೆಲ್ಲ ಕಿಟಕಿಯ ಮೂಲಕ ಹೊರಗಿನ ಲೋಕವು ವಿವಿಧ ನಮೂನೆಯಲ್ಲಿ ಗೋಚರಿಸುವುದನ್ನು ಗಮನಿಸುತ್ತೇನೆ. ನಿಂತ ಗಿಡಮರಗಳು ಹಿಂಚಲಿಸುತ್ತಿರುವ ವಿಭ್ರಮೆಯನ್ನು ಹುಟ್ಟಿಸುತ್ತವೆ; ಹಿಮಾಲಯದಲ್ಲಿ ಆಜುಬಾಜುವಿನ ಚೂಪಾದ ಪರ್ವತಗಳು ಮೈಮೇಲೆರಗಿದಂತೆ ಬರುತ್ತವೆ. ಹರಿವ ಹೊಳೆಯಲ್ಲಿದ್ದು ಚಂಚಲ ದಡಗಳನ್ನು ವೀಕ್ಷಿಸುತ್ತೇನೆ. ಹೂಗ್ಲಿ ಹೊಳೆಯಲ್ಲಿ ಪಯಣಿಸುವಾಗ ಕೋಲ್ಕತ್ತೆಯ ಬೇರೆಯದೇ ನೋಟ ದೊರಕಿತು. ಬನಾರಸ್ಸಿನಲ್ಲಿದ್ದಾಗ, ಬೆಳಗಿನ ಜಾವವೆದ್ದು ಹರಿಶ್ಚಂದ್ರ ಘಾಟಿನಿಂದ ಮಣಿಕರ್ಣಿಕಾ ತನಕ ಹಬೆಯಾಡುವ ಗಂಗೆಯಲ್ಲಿ ಪಯಣಿಸಿದೆ. ಮುಸುಕು ಮಬ್ಬಿನಲ್ಲಿದ್ದ ಎಳೆಬೆಳಕಿಗೆ ಆಗಷ್ಟೆ ಕಣ್ಬಿಡುತ್ತಿದ್ದ ಕಿನಾರೆಯ ಪುರಾತನ ಕಟ್ಟಡಗಳೂ ಚಲಿಸುವಂತೆ ನಟಿಸಿದವು. ಹೊಯ್ದಾಡುವ ಕಡಲ ಮೇಲಿಂದ ನೆಲದತ್ತ ನೋಡಿದರೆ, ಮತ್ತೊಂದೇ ಮಾಯಾಲೋಕ. ಮೊದಲಿಗೆ ದೂರದ ಬೆಟ್ಟವು ನೀರಾಟದಲ್ಲಿರುವ ಆನೆಯ ಬೆನ್ನಂತೆ ಕಾಣುತ್ತದೆ. ಸನಿಹ ಬರುಬರುತ್ತಾ ಸಹಜಗಾತ್ರದಲ್ಲಿ ಮೈದಳೆದು ಅನಾವರಣಗೊಳ್ಳುತ್ತದೆ. ಜಲಭೀತಿಯಿಂದ ಪಾರಾದ ಭಾವದಿಂದಲೊ ಏನೊ ಅದು ಆಪ್ತವೂ ಆಗುತ್ತದೆ. ಅಂಡಮಾನ್ ಪ್ರವಾಸದಲ್ಲಿ ದ್ವೀಪಗಳ ಚಿಹ್ನೆ ಕಂಡ ಹಡಗಿನ ಪಯಣಿಕರಂತೂ ಕೇಕೆ ಹಾಕುತ್ತಿದ್ದರು.

ಇನ್ನು ನೆಲದಿಂದ ನಭಕ್ಕೆ ಕಣ್ಣು ನೆಟ್ಟರೆ ಸಿಗುವ ದೃಶ್ಯಾವಳಿಯೇ ಬೇರೆ. ಎಳವೆಯಲ್ಲಿದ್ದಾಗ ಅಂಗಳದಲ್ಲೋ ರಾಗಿಕಣದಲ್ಲೋ ಮಲಗಿ ರಾತ್ರಿ ಅದರ ವಿವಿಧ ಮಜಲುಗಳನ್ನು ಅನುಭವಿಸುತ್ತಿದ್ದುದು ನೆನಪಾಗುತ್ತಿದೆ. ಚಲಿಸುವ ಮೋಡಗಳ ಹಿನ್ನೆಲೆಯಲ್ಲಿ ಚಂದ್ರತಾರೆಗಳು ಎಲ್ಲಿಗೋ ಅವಸರದಲ್ಲಿ ಧಾವಿಸುತ್ತಿದ್ದವು; ಹಗಲ ಹೊತ್ತು ಬೆಳ್ಳಿಯ ಗಿಲ್ಲಿಯಂತಿದ್ದ ವಿಮಾನ, ರಾತ್ರಿ ಹಾರುವ ಕಿಡಿಯಾಗುತ್ತಿತ್ತು; ಕಾರ್ಗಾಲದ ಕಾರ್ಮುಗಿಲು ಕವುಚಿಬಿದ್ದ ಕಂಬಳಿಯಾಗಿ ಬದಲಾಗುತ್ತಿತ್ತು; ಬಿಳಿಮುಗಿಲು ಒಣಹಾಕಿದ ಅರಳೆಯ ರಾಶಿಯಾಗುವಂತೆ, ಕಣ್ಕಟ್ಟು ಮಾಡುತ್ತಿದ್ದವು. ಇದೇ ಬಿಳಿಮೋಡ, ತಾಯ್ತನದ ಪುತಿನ ಅವರಿಗೆ ‘ಬಾನಿನ ನೀಲಿಯ ಜಗಲಿ ಮೇಲೆ ತಿಳಿಮುಗಿಲಿನ ಕೂಸಾಡು’ವಂತೆ